


ಚಿತ್ರಗಳು: ಸೃಜನ್

ಅಂತ ಒಂದಷ್ಟು ಹೊತ್ತು ಸುಮ್ಮನೆ ಕುಳಿತಿದ್ದುಂಟು. ಆದರೇನು ಮಾಡುವುದು, ಮನಸ್ಸು ತಡೆಯಲೆ ಇಲ್ಲ. ರನ್ನನ ಗದಾಯುದ್ಧದಲ್ಲಿ ಕರ್ಣನ ಬಗೆಗಿನ ದುರ್ಯೋಧನ ವಿಲಾಪವನ್ನ ಓದುತ್ತಿದ್ದಂತೆ ಅವರಿಗೆ ಸಂವಾದಿಯಾಗಿ ರಾಘವಾಂಕನ ಚಂದ್ರಮತಿಯ ಪ್ರಲಾಪ ನೆನಪಾಗಬೇಕೆ? ತೌಲನಿಕವಾಗಿ ನೋಡಲು ಅದನ್ನೂ ಬಳಿಯಿರಿಸಿಕೊಂಡಿದ್ದರೆ ಎನ್ನಿಸಿದ್ದೆ...

ಡಾಕ್ಟರೇನೊ ಹೇಳಿದ್ದರು. ಮತ್ತೇನಲ್ಲ, ಒಂದಷ್ಟು ಉಳುಕಿದ ಹಾಗಾಗಿದೆ, ಈ ಆಯಿಲ್ ರಬ್ ಮಾಡುತ್ತಿರಿ, ಒಂದು ತಿಂಗಳು ರೆಸ್ಟ್ ಮಾಡಿ, ಸರಿ ಹೋಗುತ್ತದೆ ಎನ್ನುವುದಾಗಿ. ಮಠಕ್ಕೆ ಹೋಗಿ ಬರುವುದನ್ನ ಬಿಟ್ಟು ಸಾಕಷ್ಟು ಕಾಲವಾಗಿದೆ. ಮತ್ತೆ ಒಂದು ತಿಂಗಳಲ್ಲಿ ತಾನು ಕಡಿದು ಗುಡ್ಡೆ ಹಾಕುವ ಕೆಲಸ ಇರದಿದ್ದರೂ ಹೊತ್ತು ಕಳೆಯುವ ಸಮಸ್ಯೆ ಇದೆಯಲ್ಲ ಅದಕ್ಕೆ ಅವರು ಆರಿಸಿಕೊಂಡಿದ್ದೆ ಕಲಿಸಿದ ಪಾಠದ ಪುಸ್ತಕಗಳನ್ನ ಮತ್ತೆ ಮತ್ತೆ ಓದುವುದು, ಅದಕ್ಕೆ ತಾನು ತರಗತಿಗಳಲ್ಲಿ ಹೇಳಿದ ವ್ಯಾಖ್ಯಾನಗಳನ್ನ ನೆನಪು ಮಾಡಿಕೊಳ್ಳುತ್ತ ಖುಷಿ ಪಡುವುದು... ಈ ಅಭ್ಯಾಸ ಮೊದಲಿಂದಲೂ ಇದ್ದದ್ದೆ, ಈಗ ಹೆಚ್ಚು ಅಷ್ಟೆ.

ಗೋಪಾಲ ಭಟ್ಟರು ಹುಡುಗರೆಲ್ಲ ಬಹಳ ಇಷ್ಟಪಡುವ ಕನ್ನಡ ಅಧ್ಯಾಪಕರಾಗಿದ್ದವರು. ಅದೇ ಅವರಿಗೊಂದು ಹೆಮ್ಮೆಯಾಗಿತ್ತು. ಬೇರೆಲ್ಲ ತರಗತಿಗಳಿಗೆ ಬಂಕ್ ಹಾಕುತ್ತಿದ್ದ ಹುಡುಗರೂ ಗೋಪಾಲ ಭಟ್ಟರ ಕ್ಲಾಸಿಗೆ ಮಾತ್ರ ಯಾವಾಗಲೂ ಬಂಕ್ ಹಾಕುತ್ತಿರಲಿಲ್ಲ. ಹಾಸ್ಯಮಿಶ್ರಿತ ಶೈಲಿಯಲ್ಲಿ ಅವರು ಹಳಗನ್ನಡ ಕಲಿಸುವ ಮೋಡಿಯೇ ಅಂತಾದ್ದಾಗಿತ್ತು. ತಮ್ಮ ಭವಿಷ್ಯಕ್ಕೆ ಎಕನಾಮಿಕ್ಸು, ಸ್ಟಾಟಿಸ್ಟಿಕ್ಸಿನ ಹಾಗೆ ಈ ಲಾಂಗ್ವೇಜ್‌ಗಳ ಮಾರ್ಕ್ಸ್ ಕೌಂಟ್ ಆಗುವುದಿಲ್ಲವೆಂದು ಗೊತ್ತಿದ್ದರೂ ಅವರ ಮಾತಿನ ಸ್ವಾರಸ್ಯಕ್ಕಾಗಿ ಅವರ ಕ್ಲಾಸು ಯಾವಾಗಲೂ ಭರ್ತಿಯೇ. ಹಾಜರಿಯನ್ನೂ ಅವರು ಯಾವತ್ತೂ ಕೂಗಿ ಕರೆದದ್ದು ಇಲ್ಲ. ಸುಮ್ಮನೆ ರೈಟ್ ರೈಟ್ ಹಾಕಿದ್ದರೆ ಸಾಕಿತ್ತು.